## ಕ್ರೌರ್ಯದ ನಾನಾ ಮುಖಗಳು

ಬಹುತೇಕ ಧಾರಾವಾಹಿಗಳಲ್ಲಿ ಖಳನಾಯಕಿಯರ ಅಬ್ಬರ ವಿಪರೀತ ಜಾಸ್ತಿ ಆಗ್ತಾ ಇದೇ ಅನ್ನೋದಕ್ಕೆ ಒಂದೆರೆಡು ಉದಾಹರಣೆ.

ಆಸ್ಪತ್ರೆಯ ಆಕ್ಸಿಜನ್ ಪೈಪಿನಲ್ಲಿ ವಿಷ ಬೆರೆಸಿ ತನ್ನ ಗಂಡನ್ನನ್ನೇ ಸಾಯಿಸಲು ಯತ್ನಿಸುವುದು. ಕಾರ್ಪೆಟ್ ಅಡಿಯಲ್ಲಿ ಕಬ್ಬಿಣದ ಮೊಳೆಗಳನ್ನ ಜೋಡಿಸಿ ತನ್ನ ಸೊಸೆಯನ್ನು ಬೀಳಿಸುವ ಅತ್ತೆ. ಬರ್ತ್ ಡೇ ಕೇಕ್‌ನಲ್ಲಿ ಸ್ಫೋಟಕ ಇಡುವ ತಾಯಿ! ಪಾಯಸಕ್ಕೆ ವಿಷ ಹಾಕುವುದು. ತಾರಸಿ ಮೇಲಿಂದ ಹೂ ಕುಂಡಗಳನ್ನು ಕೆಳಗೆ ನಿಂತ ಅಣ್ಣನ ತಲೆಯ ಮೇಲೆ ಎತ್ತಿ ಹಾಕುವ ಸ್ವಂತ ಅಕ್ಕ. ಹೀಗೆ ಹಲವು.

ಗಮನಿಸಿ: ಈ ಮೇಲಿನ ಎಲ್ಲ ಪಾತ್ರಗಳಿಗೆ ಬಳಸಿಕೊಂಡಿರುವುದು ಹೆಣ್ಣನ್ನೇ! ಅಂದರೆ 'ತಾಯಿ, ಅಕ್ಕ, ತಂಗಿ, ಹೆಂಡತಿ, ಚಿಕ್ಕಮ್ಮ' ಮುಂತಾದ ಸಂಬಂಧಗಳಿಗೆ ಬೆಲೆಯೇ ಇಲ್ಲವೇ? ಮನೆ, ಮನಸ್ಸನ್ನು ಒಡೆಯುವ ಕಳಪೆ ಮಟ್ಟದ ಧಾರಾವಾಹಿಗಳು ಸಮಾಜಕ್ಕೆ ಯಾವ ಸಂದೇಶ ನೀಡುತ್ತವೆ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಗುಡ್ 'ಬಾಸ್'..

ಕಲರ್ಸ್ ಕನ್ನಡದ ರಿಯಾಲಿಟಿ ಶೋ 'ಬಿಗ್ ಬಾಸ್'ನ ಪ್ರತಿ ಸರಣಿಯಲ್ಲೂ ಖಾಯಮ್ಮಾಗಿ ಇರುತ್ತಿದ್ದ ಮಸಿಬಳಿಯುವ ಟಾಸ್ಕ್. ಸ್ಪರ್ಧಿಗಳ ಋಣಾತ್ಮಕ ಅಂಶಗಳನ್ನು ತಿಳಿಸಿ ಆ ಸ್ಪರ್ಧಿಯ ಮುಖಕ್ಕೆ ಮಸಿ ಬಳಿಯುವುದು ಇದರ ಪರಿಕಲ್ಪನೆ. ಸಾಮಾಜಿಕ ಚಿಂತಕರು ಹಾಗೂ ಕೆಲವು ಪ್ರಗತಿಪರ ಚಿಂತಕರ ಮುಖಕ್ಕೆ ಮಸಿ ಬಳಿಯುವ ಕೃತ್ಯಗಳು ಸಾರ್ವಜನಿಕ ಸ್ಥಳಗಳಲ್ಲೇ ಎಷ್ಟೋ ನಡೆಯುತ್ತಿದ್ದವು.

ವಿದ್ಯಾವಂತ ನಾಗರಿಕ ಸಮಾಜಕ್ಕೆ ಕೆಟ್ಟ ಸಂದೇಶವನ್ನು ಈ ಮೂಲಕ ರವಾನೆಯಾಗುತ್ತಿದ್ದ ಮಸಿ ಬಳಿಯುವ ಟಾಸ್ಕ್ ಈ ಸರಣಿಯಲ್ಲಿ ಕೈಬಿಟ್ಟಿರುವುದು ಒಳ್ಳೆಯ ಕೆಲಸ. ಹಾಗೆಯೇ ಚಲನಚಿತ್ರ ಗೀತೆಗಳಿಗೆ ಸ್ವಲ್ಪ ಪ್ರಾಮುಖ್ಯತೆ ಸಿಕ್ಕಿರುವುದು ನಮಗೆಲ್ಲರಿಗೂ ಖುಷಿ ಕೊಟ್ಟ ವಿಚಾರ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಶುಚಿತ್ವವೇ ಮುಖ್ಯ

ಸ್ಟಾರ್ ಸುವರ್ಣದ 'ಸರಸು' ಅದಿತಿ ಮೇಡಮ್ ಮಗನ ನೆನಪಿನಲ್ಲಿ ಕಣ್ಣೀರು ಒರೆಸಿಕೊಂಡು, ಅದೇ ಕೈನಲ್ಲಿ ಸರಸುಗೂ, ಅರವಿಂದ್‌ಗೂ ಕೈತುತ್ತು ಹಾಕುವುದು. ಸರಸು, ಅರವಿಂದ್ ಕೈಗಳನ್ನು ತೊಳೆಯದೆ ಕೈ ತುತ್ತುಗಳನ್ನು ತಿನ್ನುವುದು ಸಮಂಜಸವಲ್ಲ.

ಈ ನಿಟ್ಟಿನಲ್ಲಿ ನಿರ್ದೇಶಕರಿಗೆ ಅಲ್ಪ ಎಂದೆನಿಸಿದರೂ ಅದರಲ್ಲಿ ಕಲ್ಪವಡಗಿರುವುದು ಅರಿಯಬೇಕು. ಮಕ್ಕಳು ಕೈ ತೊಳೆದು ತಿನ್ನುವುದು ಕಥೆಯ ಅವಿನಾಭಾವದೊಂದಿಗೆ ಶುಚಿತ್ವದ ಪಾಠವನ್ನು ತಿಳಿಸಿದಂತಾಗುವುದು. ಇಂದಿನ ಕೋವಿಡ್ ದಿನಗಳಲ್ಲಿ ಎಷ್ಟು ಎಚ್ಚರಿಕೆಯಿಂದಿದ್ದರೂ ಸಾಲದು.

—ಪೂರ್ಣಿಮಾ ಮೂರ್ತಿ, ಬೆಂಗಳೂರು

ವಾರದ ಪತ್ರ

## ಕತ್ತರಿ ಹಾಕದೇ ಕಥೆ ಹೇಳಿದರೆ...

ಬಿಗ್‌ಬಾಸ್‌ನಲ್ಲಿ ಚಕ್ರವರ್ತಿ ಅಶ್ಲೀಲ ಕೈ ಸಜ್ಞೆಯನ್ನು ಮಾಡಿದರು ಎಂದು ದೊಡ್ಡ ಪಂಚಾಯತಿ ನಡೆಯುತ್ತದೆ. ಸುದೀಪ್ ನೈತಿಕತೆಯ ಅವತಾರ ಎಂಬಂತೆ ಭಾಷಣ ಬಿಗಿಯುತ್ತಾರೆ. ಟೀವಿಯಲ್ಲಿ ಮನೆಮಂದಿ ನೋಡುವುದು ಹೇಗೆ ಎಂದು ದಂಡಿಸುತ್ತಾರೆ... ಇವೆಲ್ಲವನ್ನು ಮಾಡುವ ಬದಲು ಆ ದೃಶ್ಯಗಳಿಗೆ ಕತ್ತರಿ ಹಾಕಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಇದೇನು ನೇರ ಪ್ರಸಾರವೇ? ಇದು ಜನರ ಮನಸ್ಥಿತಿಯ ಬಿಂಬ ಎಂದು ಸುಮ್ಮನಿದ್ದರೂ ಆಗುತ್ತಿತ್ತು.

ಗಂಡ– ಹೆಂಡತಿ ನಡುವೆ ಇರಬೇಕಾಗಿರುವ ಒಡನಾಟವನ್ನು ಬಹಿರಂಗವಾಗಿ ಮಾಡುವುದು. ಇಬ್ಬರು ಹೆಂಡಿರ ಸರದಾರನಿಗೆ 'ಯಾರಿಗೆ ಎಷ್ಟು ಮುತ್ತು ಕೊಟ್ಟಿರಿ' ಎಂದು ಕೇಳುವುದು ನಮ್ಮ ಸಮಾಜದ ಮೌಲ್ಯಹೀನತೆಯ ಇನ್ನೊಂದು ಸಂಕೇತ. ಅಲ್ಲದೆ ಇದರಲ್ಲಿ ತೀರ್ಪುಗಾರರಾದರೂ ಯಾಕೆ ಬೇಕು?

'ಸೂಪರ್ ಸ್ಟಾರ್' ಎಂಬ ಇನ್ನೊಂದು ಶೋನಲ್ಲಿ, ವೃದ್ಧಾಶ್ರಮದ ಹಿರಿಯ ಹೆಂಗಸರು ಪಾಲ್ಗೊಂಡಿದ್ದರು. ಒಬ್ಬರು ತಮ್ಮ ಮಗಳು ದೂರದ ಊರೊಂದರಲ್ಲಿ ತೀರಿಹೋದರೂ ನೋಡಲು ಹೋಗಲಾಗಲಿಲ್ಲ ಎಂದರು. ಆಗ ಶಾಲಿನಿಯವರು 'ಅಯ್ಯೋ ಪಾಪ ನಿಮಗೆ ಎಷ್ಟು ಬೇಜಾರಾಗಿರಬೇಕು ಅಲ್ವಾ' ಎಂದು ಅವರನ್ನೇ ಕೇಳುತ್ತಾರೆ.

—ವಿನಯ್ ಎಂ.ಎಸ್. ಬೆಂಗಳೂರು

## ಸಮಯ ಬದಲಿಸಿ

ಝೀ ಕನ್ನಡದಲ್ಲಿ 'ಸತ್ಯ'ದ ಮರುಪ್ರಸಾರವನ್ನು ಈಗ ಮಾರನೇ ದಿನ ಬೆಳಿಗ್ಗೆ 11 ಗಂಟೆಗೆ ಮಾಡಲಾಗುತ್ತಿದೆ. ಮೊದಲು ಹೀಗಿರಲಿಲ್ಲ ರಾತ್ರಿ 11 ಗಂಟೆ ನಂತರ ಪ್ರಸಾರಾವಾಗುತ್ತಿತ್ತು. 9ಗಂಟೆಗೆ ತಪ್ಪಿದರೂ ಆ ಸಮಯದಲ್ಲಿ ನೋಡಬಹುದಾಗಿತ್ತು. ಈಗ ಹಾಗಾಗುವುದಿಲ್ಲ. ಮೊದಲಿದ್ದ ಹಾಗೆ ಮರುಪ್ರಸಾರ ಮಾಡಿದರೆ ವೀಕ್ಷಕರಿಗೆ ಅನುಕೂಲವಾಗಬಹುದು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮನಸೆಳೆದ ಧಾರಾವಾಹಿ

ನಾನು ಸಾಮಾನ್ಯವಾಗಿ ಕನ್ನಡ ಧಾರಾವಾಹಿಗಳನ್ನು ನೋಡುವುದಿಲ್ಲ. ಆದರೆ ಇತ್ತೀಚೆಗೆ ದೂರದರ್ಶನದ ಚಂದನವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಸಾವಿತ್ರಿ' ಧಾರಾವಾಹಿಯನ್ನು ನೋಡಲು ಕಾತರ ಪಡುತ್ತೇನೆ!

ಮುಗ್ಧ ಬಾಲಕಿಯೊಬ್ಬಳು ತರ್ಕಬದ್ಧವಾಗಿ ಮೂಢ ನಂಬಿಕೆಗಳ ವಿರುದ್ಧ ಆಡುವ ಮಾತುಗಳು ನನ್ನ ಮನ ಕಲಕುತ್ತವೆ. ಸುಳ್ಳಿನ ವಿರುದ್ಧ ಅವಳ ಸಮರ ಹೃದಯವನ್ನು ಮೆಚ್ಚಿಸುತ್ತದೆ.

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

## ಮಾದರಿ ಕಾರ್ಯಕ್ರಮ

ಕಲರ್ಸ್ ಕನ್ನಡದ 'ರಾಜ ರಾಣಿ' ಕಾರ್ಯಕ್ರಮ ಪ್ರಾರಂಭವಾಗಿದೆ. ದಂಪತಿಗೆ ಉತ್ತಮ ಮಾಹಿತಿ ತಿಳಿಸುತ್ತದೆ. ಸೆಲೆಬ್ರಿಟಿಗಳು ತಮ್ಮ ಜೀವನದ ಏಳು ಬೀಳುಗಳನ್ನು ಮುಕ್ತವಾಗಿ ಹಂಚಿಕೊಳ್ಳುತ್ತಿದ್ದಾರೆ. ಇದನ್ನು ನೋಡಿದರೆ ಹಲವಾರು ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಮುಕ್ತವಾಗಿ ಚರ್ಚಿಸಿ ನಿವಾರಿಸಿಕೊಳ್ಳಬೇಕಾದ ಮಾಹಿತಿ ಸಿಗುತ್ತದೆ. ತೀರ್ಪುಗಾರರಾದ ನಟ ಸೃಜನ್ ಲೋಕೇಶ್ ತಮಾಷೆ ಮಾಡುತ್ತಾ ಹಾಗೂ ನಟಿ ತಾರಾ ಅನುರಾಧಾ ಅವರು ಕಾರ್ಯಕ್ರಮ ವೀಕ್ಷಿಸಿ ಪ್ರತಿಕ್ರಿಯಿಸುತ್ತಿದ್ದಾರೆ. ಸ್ಪರ್ಧಿಗಳ ವಸ್ತ್ರವಿನ್ಯಾಸ ಚೆನ್ನಾಗಿದೆ. ಅನುಪಮಾ ಅವರ ನಿರೂಪಣೆಯೂ ಸೊಗಸಾಗಿದೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಉದ್ದುದ್ದದ ಭಾಷಣ

ಕಲರ್ಸ್ ಕನ್ನಡದ 'ಕನ್ನಡತಿ' ಚೆನ್ನಾಗಿ ಬರುತ್ತಿದೆ. ಎಲ್ಲ ವಯೋಮಾನದವರೂ ನೋಡಬಹುದು. ಇತ್ತೀಚೆಗೆ ಅದರಲ್ಲಿ ಸಂಭಾಷಣೆ ತುಂಬಾ ಜಾಸ್ತಿಯಾಯಿತು. ವ್ಯಾಕ್ಸಿನೇಷನ್ ಹಾಕಿಸಿಕೊಳ್ಳುವಾಗಲಂತೂ ಸಿಕ್ಕಾಪಟ್ಟೆ ಮಾತುಗಳು ಅಗತ್ಯ ಇದೆಯೇ ಎಂದೆನಿಸಿತು.

ವರ್ತಮಾನದ ಆಗು–ಹೋಗುಗಳನ್ನೆಲ್ಲ ಗಡಿಬಿಡಿಯಲ್ಲಿ ತಮ್ಮ ಸೀರಿಯಲ್ ಮುಖಾಂತರ ಹೇಳಲು ಹೊರಟಹಾಗಿದೆ. ವ್ಯಾಕ್ಸಿನೇಷನ್ ಎಷ್ಟು ಮುಖ್ಯ ಎನ್ನುವುದು ಬಹುತೇಕ ಎಲ್ಲರಿಗೂ ತಿಳಿದಿದೆ. ಆದರೂ ಈ ಧಾರಾವಾಹಿಯಲ್ಲಿ ಕೂಡ ಅದೇ ಮಾತುಗಳು. ಕನ್ನಡ ಅಧ್ಯಾಪಕಿ ಆದವರು ಕಾಲೇಜಿನಲ್ಲಿ ಪಾಠ ಮಾಡುವುದಕ್ಕಿಂತ, ಬೇರೆಯವರ ಮನೆಯಲ್ಲೇ ಕಾಲ ಕಳೆಯುತ್ತಾರೆ. ಉದ್ದುದ್ದ ಸಂಭಾಷಣೆ ಕಡಿಮೆ ಮಾಡಿ, ಸ್ವಲ್ಪ ತೂಕದ, ನೇರವಾದ ಮಾತುಗಳನ್ನು ಅಳವಡಿಸಿ ಕಥೆ ಮುಂದುವರಿಸಲಿ ಎಂಬುದು ನಮ್ಮೆಲ್ಲರ ಆಸೆ.

—ಟಿ.ಎನ್. ಜಯಂತಿ ಶಾಸ್ತ್ರಿ, ಮೈಸೂರು